C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ.132/2021

ದಿನಾಂಕಃ 27.09.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ
ಸಿ. ಡಬ್ಲ್ಯೂ :17 ಪಿ. ಡಬ್ಲ್ಯೂ :13

| | |
|---|---|
| ಸಾಕ್ಷಿದಾರರ ಹೆಸರು | ಸ್ವಾಮಿ |
| ತಂದೆಯ ಹೆಸರು | ವೆಂಕಟೇಗೌಡ |
| ವಯಸ್ಸು | 56 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಬೇವಿನಹಳ್ಳಿ, ಮಂಡ್ಯ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ಈಗ ನನಗೆ ತೋರಿಸುತ್ತಿರುವ 1 ನೇ ಫೋಟೋದಲ್ಲಿ ನಾನು, ಪೊಲೀಸರು, ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತ, ಪೊಲೀಸ್ ಇನ್ಸ್ಪೆಕ್ಟರ್, ಸುಂಡಹಳ್ಳಿ ಊರಿನವರು ಒಬ್ಬರು ಮತ್ತು ಗುಂಡ್ಲುಪೇಟೆಯ ವ್ಯಕ್ತಿ ಒಬ್ಬರು ಇದ್ದಾರೆ ಹಾಗೂ ಫೋಟೋದಲ್ಲಿ ಕಾಣಿಸುತ್ತಿರುವ ಸದರಿ ಗುಂಡ್ಲುಪೇಟೆ ವ್ಯಕ್ತಿಯು ಆರೋಪಿಗೆ ಸಿಮ್ ನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದಾರೆ. ಸದರಿ ಫೋಟೋದಲ್ಲಿ ಇರುವ ಜಾಗವು ಗುಂಡ್ಲುಪೇಟೆಯಲ್ಲಿ, ಸಿಮ್ ನ್ನು ಕೊಟ್ಟಿದ್ದ ವ್ಯಕ್ತಿಯ ಮನೆಯ ಹತ್ತಿರದ ಜಾಗ ಆಗಿರುತ್ತದೆ. ಪೊಲೀಸರು ನನ್ನನ್ನು ಗುಂಡ್ಲುಪೇಟೆಯ ಸದರಿ ಜಾಗಕ್ಕೆ ಮಹಜರ್ ಗೆ ಬನ್ನಿ ಎಂದು ಹೇಳಿ ಕರೆದುಕೊಂಡು ಹೋಗಿದ್ದರು. ಪೊಲೀಸರು, ಇಲ್ಲಿ ಒಂದು ಮರ್ಡರ್ ಆಗಿತ್ತು ಎಂದು ನನಗೆ ತಿಳಿಸಿದ್ದರು. 2-3 ವರುಷಗಳು ಆಗಿರಬಹುದು, ದಿನಾಂಕ ನೆನಪಿಲ್ಲ. ಸದರಿ ಮೇಲೆ ಹೇಳಿದ ಜಾಗಕ್ಕೆ ಹೋದಾಗ ಸಮಯ ಮಧ್ಯಾಹ್ನ 12.00 ಗಂಟೆ ಮೇಲೆ ಆಗಿತ್ತು. ಪೊಲೀಸರು, ಸದರಿ ಜಾಗದಲ್ಲಿ ಫೋಟೋಗಳನ್ನು ತೆಗೆಸಿದರು ಹಾಗೂ ಮೊಬೈಲ್ ಸಿಮ್ ನ್ನು ಆರೋಪಿಗೆ ಗುಂಡ್ಲುಪೇಟೆ ವ್ಯಕ್ತಿ ಕೊಟ್ಟಿದ್ದರು ಎಂದು ತಿಳಿಸಿದ್ದರು.

2) ಈಗ ನೋಡುತ್ತಿರುವ 2 ನೇ ಫೋಟೋದಲ್ಲಿ, ನಾನು, ಪೊಲೀಸರು, ನನ್ನ ಜೊತೆಯಲ್ಲಿ ಬಂದಿದ್ದ ಸುಂಡಹಳ್ಳಿಯವರು, ಪೊಲೀಸ್ ಇನ್ಸ್ ಪೆಕ್ಟರ್ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತ ಇದ್ದೇವೆ.ಸದರಿ 2 ಫೋಟೋಗಳನ್ನು ನಿಪಿ.65 ಮತ್ತು ನಿಪಿ.66 ಎಂದು

ಗುರುತಿಸಲಾಯಿತು. ಪೊಲೀಸರು ಸ್ಥಳದಲ್ಲಿ ಮಹಜರನ್ನು ಮಾಡಿಕೊಂಡು, ಸ್ಥಳದ ಫೋಟೋಗಳನ್ನು ತೆಗೆದುಕೊಂಡರು ಹಾಗೂ ಮಹಜರ್ ಗೆ ನನ್ನ ಸಹಿಯನ್ನು ಸ್ಥಳದಲ್ಲೇ ಹಾಕಿಸಿಕೊಂಡಿದ್ದರು. ರಾ ಮಹಜರನ್ನು ಈಗ ನೋಡುತ್ತಿದ್ದು, ಇದನ್ನು ನಿಪಿ.67 ಎಂದು ಗುರುತಿಸಲಾಯಿತು. ಹಾಗೂ ಸದರಿ ಮಹಜರ್ ನಲ್ಲಿ ಇರುವ ನನ್ನ ಸಹಿಯನ್ನು ನಿಪಿ.67(ಎ) ಎಂದು ಗುರುತಿಸಲಾಯಿತು. ಮಹಜರ್ ಗೆ ನನ್ನ ಜೊತೆಯಲ್ಲಿ ಬಂದಿದ್ದ ಸುಂಡಹಳ್ಳಿಯವರು ಸಹ ಸಹಿ ಮಾಡಿದ್ದರು.

3) ಈಗ ನೋಡುತ್ತಿರುವ 3 ಮತ್ತು 4 ನೇ ಫೋಟೋದಲ್ಲಿ ನಾನು, ಸುಂಡಹಳ್ಳಿಯವರು ಒಬ್ಬರು, ಪೊಲಿಸ್ ಇನ್ಸ್ಪೆಕ್ಟರ್ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿ ಇದ್ದೇವೆ. ಸದರಿ ಘೋಟೋದಲ್ಲಿ ಕಾಣಿಸುತ್ತಿರುವ ಜಾಗವು ಮೈಸೂರಿನಲ್ಲಿ ಇರುವ ಅಶೋಕಪುರಂ ನ ಸಂದಿಯಲ್ಲಿ ಆರೋಪಿಯು ನಮ್ಮನ್ನು ಕರೆದುಕೊಂಡು ಹೋಗಿರುವ ಜಾಗ ಆಗಿರುತ್ತದೆ. ಆರೋಪಿಯು, ಸದರಿ ಜಾಗದ ಬಗ್ಗೆ, ಬಟ್ಟೆ ಮತ್ತು ಸಿಮ್ ನ್ನು ಸುಟ್ಟು ಹಾಕಿದ್ದ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದರು. ಆರೋಪಿಯು ಉಪಯೋಗಿಸುತ್ತಿದ್ದ ಮೊಬೈಲ್ ಸಿಮ್‌ನ್ನು ಮತ್ತು ಆತನ ಬಟ್ಟೆಯನ್ನು ಮನೆಯ ಒಳಗೆ ಇರುವ ಸ್ನಾನದ ಮನೆಯ ಒಲೆಯ ಒಳಗೆ ಸುಟ್ಟಿ ಹಾಕಿದ್ದಾಗಿ ಮಾಹಿತಿಯನ್ನು ಕೊಟ್ಟಿದ್ದನು. ಸುಟ್ಟ ಹಾಕಿದ್ದ ಬಟ್ಟೆ ಮತ್ತು ಸಿಮ್‌ಗಳನ್ನು, ಆರೋಪಿಯು ಮರ್ಡರ್ ಮಾಡುವಾಗ ಉಪಯೋಗಿಸಿದ್ದೆ ಎಂದು ತಿಳಿಸಿದನು. ಸದರಿ ಜಾಗದಲ್ಲಿ ಆರೋಪಿಯು ಸೀಮೆಎಣ್ಣೆ ಹಾಕಿ ಸುಟ್ಟ ಹಾಕಿದ್ದ ಬಟ್ಟೆ ಮತ್ತು ಸಿಮ್ ಜಾಗವನ್ನು ತೋರಿಸಿದರು. ನಂತರ ಆರೋಪಿಯು ಒಂದು ಸ್ಕೂಟರ್ ನ್ನು ಅಶೋಕಪುರಂ ನ ಮನೆಯ ಹತ್ತಿರ ತೋರಿಸಿ, ಅದೇ ಸ್ಕೂಟರ್ ನಲ್ಲಿ ಹೋಗಿ ಬಂದಿದ್ದಾಗಿ ತಿಳಿಸಿದನು. ಸದರಿ ಸ್ಕೂಟರ್ ಇರುವ 2 ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಸ್ಕೂಟರ್ ಇರುವ ಎರಡು ಫೋಟೋಗಳನ್ನು ನೋಡಿ ಗುರತಿಸಲಾಯಿತು. ಅವುಗಳನ್ನು ನಿಪಿ.68 ಮತ್ತು ನಿಪಿ.69 ಎಂದು ಗುರುತಿಸಲಾಯಿತು.

4) ಈಗ ನೋಡುತ್ತಿರುವ 5 ನೇ ಫೊಟೋದಲ್ಲಿ ನಾನು, ಸುಂಡಹಳ್ಳಿಯವರು ಒಬ್ಬರು, ಪೊಲೀಸ್ ಇನ್ಸ್ಪೆಕ್ಟರ್, ಇಬ್ಬರು ಪೊಲೀಸರು ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿ ಇದ್ದೇವೆ. ಸದರಿ ಫೋಟೋದಲ್ಲಿ ಆರೋಪಿಯು ಬಟ್ಟೆಗಳನ್ನು ತೋರಿಸುತ್ತಿದ್ದಾರೆ. ಆ ಬಟ್ಟೆಯನ್ನು ಆರೋಪಿಯು ಹಾಕಿಕೊಂಡಿದ್ದಾಗಿ ತಿಳಿಸಿದರು. ಸದರಿ ಫೋಟೋವನ್ನು ನಿಪಿ.70 ಎಂದು ಗುರುತಿಸಲಾಯಿತು.

5) ಈಗ ನೋಡುತ್ತಿರುವ 6 ನೇ ಫೊಟೋದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಪೊಲೀಸರಿಗೆ ಇದೇ ಗಾಡಿ ಎಂದು ತೋರಿಸುತ್ತಿದ್ದಾರೆ. ಸದರಿ ಫೋಟೋವನ್ನು ನಿಪಿ.71 ಎಂದು ಗುರುತಿಸಲಾಯಿತು.

6) ಈಗ ನೋಡುತ್ತಿರುವ 7 ನೇ ಫೊಟೋದಲ್ಲಿ ನಾನು, ಆರೋಪಿ, ಸುಂಡಹಳ್ಳಿಯವರು ಒಬ್ಬರು ಮತ್ತು ಪೊಲೀಸ್ ಇನ್ಸ್ಪೆಕ್ಟರ್ ಇದ್ದೇವೆ. ಸದರಿ ಫೋಟೋದಲ್ಲಿ ಬಾಟಲಿ ಹಿಡಿದುಕೊಂಡು, ಅದರಲ್ಲಿ ಸೀಮೆಎಣ್ಣೆ ತಂದಿದ್ದೆನು ಎಂದು ತೋರಿಸುತ್ತಿದ್ದಾರೆ. ಸದರಿ ಫೋಟೋವನ್ನು ನಿಪಿ.72 ಎಂದು ಗುರುತಿಸಲಾಯಿತು.

7) ಈಗ ನೋಡುತ್ತಿರುವ 8 ನೇ ಫೊಟೋದಲ್ಲಿ ನಾನು, ಸುಂಡಹಳ್ಳಿಯವರು ಒಬ್ಬರು, ಪೊಲೀಸರು ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತ ಮತ್ತು ಇನ್ಸ್ಪೆಕ್ಟರ್ ಇದ್ದೇವೆ. ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ಜಾಗವು ಮೈಸೂರಿನ ಮನೆಯ ಮೇಲೆ ಬಟ್ಟೆ ಒಣಗಿ ಹಾಕಿರುವ ಜಾಗ ಆಗಿರುತ್ತದೆ. ಆರೋಪಿಯು, ಆತನು ಹಾಕಿಕೊಂಡಿದ್ದ ಬಟ್ಟೆಗಳನ್ನು ಹೊಗೆದು ಒಣಗಿ ಹಾಕಿದ್ದರ ಬಗ್ಗೆ ತಿಳಿಸುತ್ತಿದ್ದಾನೆ. ಸದರಿ ಫೋಟೋವನ್ನು ನಿಪಿ.73 ಎಂದು ಗುರುತಿಸಲಾಯಿತು.

8)ಈಗ ನೋಡುತ್ತಿರುವ 9 ನೇ ಫೊಟೋದಲ್ಲಿ ಮೈಸೂರಿನ ಮನೆಯಲ್ಲಿ ಇರುವ ಸ್ನಾನದ ಮನೆಯ ಒಳಗೆ, ಸುಟ್ಟು ಹಾಕಿದ ಬಟ್ಟೆಗಳನ್ನು ಮತ್ತು ಸಿಮ್ ನ್ನು, ಒಲೆಯಿಂದ ಹೊರಗೆ ತೆಗೆದುಕೊಂಡು, ಕವರ್ ಗೆ ತುಂಬುತ್ತಿರುವುದು ಕಾಣಿಸುತ್ತದೆ. ಸದರಿ ಫೋಟೋವನ್ನು ನಿಪಿ.74 ಎಂದು ಗುರುತಿಸಲಾಯಿತು.

9) ಈಗ ನೋಡುತ್ತಿರುವ 10 ನೇ ಫೊಟೋದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಎಲ್ಲ ಆದ ಮೇಲೆ ಕವರ್ ನಲ್ಲಿ ತುಂಬಿದ್ದನ್ನು ಪೊಲೀಸರ ಕೈಗೆ ಕೊಡುತ್ತಿದ್ದಾನೆ. ಸದರಿ ಫೋಟೋವನ್ನು ನಿಪಿ.75 ಎಂದು ಗುರುತಿಸಲಾಯಿತು.

10) ಈಗ ನೋಡುತ್ತಿರುವ 11 ನೇ ಫೊಟೋದಲ್ಲಿ, ಆರೋಪಿಯು, ಮೈಸೂರಿನ ಅಶೋಕ ಪುರಂ ಮನೆಯಲ್ಲಿ ವಾಸ ಇದ್ದಿದನ್ನು ತೋರಿಸುತ್ತಿದ್ದಾನೆ. ಸದರಿ ಫೋಟೋವನ್ನು ನಿಪಿ.76 ಎಂದು ಗುರುತಿಸಲಾಯಿತು.

11) ಈಗ ನೋಡುತ್ತಿರುವ 12 ನೇ ಫೋಟೋದಲ್ಲಿ, ಆರೋಪಿಯು, ಒಲೆ ಒಳಗೆ ಇದ್ದ ಎಲ್ಲವನ್ನು ತೆಗೆದುಕೊಂಡಿದ್ದನ್ನು ಇದೇ ಒಲೆ ಎಂದು ಪೊಲೀಸರಿಗೆ ತೋರಿಸುತ್ತಿದ್ದಾನೆ. ಸದರಿ ಫೋಟೋವನ್ನು ನಿಪಿ.77 ಎಂದು ಗುರುತಿಸಲಾಯಿತು.

12) ಈಗ ನೋಡುತ್ತಿರುವ 13 ನೇ ಫೋಟೋದಲ್ಲಿ, ಆರೋಪಿಯು, ಇದೇ ಮನೆಯಲ್ಲಿ ನಾನು ಎಲ್ಲವನ್ನು ಸುಟ್ಟು ಹಾಕಿದ್ದು ಎಂದು ಹೇಳುತ್ತಿದ್ದಾನೆ. ಸದರಿ ಫೋಟೋವನ್ನು ನಿಪಿ.78 ಎಂದು ಗುರುತಿಸಲಾಯಿತು.

13) ಈಗ ನೋಡುತ್ತಿರುವ 14 ನೇ ಫೋಟೋದಲ್ಲಿ, ಆರೋಪಿಯು, ಮನೆಯ ಒಳಗೆ ಕರೆದುಕೊಂಡು ಹೋಗಿ ಇದೇ ಮನೆ ಎಂದು ತೋರಿಸುತ್ತಿದ್ದಾನೆ. ಸದರಿ ಫೋಟೋವನ್ನು ನಿಪಿ.79 ಎಂದು ಗುರುತಿಸಲಾಯಿತು.

14) ಪೊಲೀಸರು, ಸುಟ್ಟ ಹಾಕಿದ್ದ ಬಟ್ಟೆ ಮತ್ತು ಸಿಮ್ ಇದ್ದ ಕವರನ್ನು ತೆಗೆದುಕೊಂಡರು. ಇದನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ, ಕಡತವನ್ನು ಪರಿಶೀಲಿಸಲಾಗಿ, ಎಫ್.ಎಸ್.ಎಲ್ ಸದರಿ ಮಾಲು ಇನ್ನೂ ವಾಪಸ್ಸು ಬಂದಿರುವುದಿಲ್ಲ. ಆದ್ದರಿಂದ ನಿಶಾನೆಗೆ ಗುರಿ ಪಡಿಸಲು ಈ ಹಂತದಲ್ಲಿ ಆಗಿರುವುದಿಲ್ಲ).

15) ಸಾಕ್ಷಿಯು ಸುಟ್ಟ ಹಾಕಿದ್ದ ಸಿಮ್ ಇದ್ದ ಮೊಬೈಲ್ ನ್ನು ನೋಡಿ ಗುರುತಿಸುತ್ತಾರೆ. ಇದನ್ನು ಮುಮಾ.21 ಎಂದು ಗುರುತಿಸಲಾಯಿತು. ಮುಮಾ.21 ರ ಮೇಲೆ ಅಂಟಿಸಿದ ಚೀಟಿಯಲ್ಲಿ ನನ್ನ ಸಹಿ ಇದೆ. ರುಜುವನ್ನು ಮುಮಾ.21(ಎ)ಎಂದು ಗುರುತಿಸಲಾಯಿತು.

ಆರೋಪಿ ನಮಗೆ ತೋರಿಸಿದ ಒಣಗಿ ಹಾಕಿದ್ದ ಶರಟನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಶರಟನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಮು ಮಾ 22 ಎಂದು ಗುರುತಿಸಲಾಯಿತು. ಮುಮಾ.22 ರ ಮೇಲೆ ಅಂಟಿಸಿದ ಚೀಟಿಯಲ್ಲಿ ನನ್ನ ಸಹಿ ಇದೆ. ರುಜುವನ್ನು ಮುಮಾ.22(ಎ)ಎಂದು ಗುರುತಿಸಲಾಯಿತು.

16) ಬಟ್ಟೆಯನ್ನು ಸೀಜ್ ಮಾಡಿದ್ದಕ್ಕೆ, ಬೂದಿಯನ್ನು ಸೀಜ್ ಮಾಡಿದ್ದಕ್ಕೆ, ಪೊಲೀಸರು ನನ್ನ ಸಹಿಯನ್ನು ತೆಗೆದುಕೊಂಡಿದ್ದರು. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ.80 ಎಂದು, ಸಾಕ್ಷಿಯ ಸಹಿಯನ್ನು ನಿಪಿ.80(ಎ) ಎಂದು ಗುರುತಿಸಲಾಯಿತು. ನನ್ನ ಜೊತೆಯಲ್ಲಿ ಸುಂಡಹಳ್ಳಿಯವರು ಸಹ ಸಹಿ ಮಾಡಿದ್ದರು. ಮೈಸೂರಿನ ಅಶೋಕ ಪುರಂ ನಲ್ಲಿ

ಇರುವ ಮನೆಗೆ ನಾವು ಹೋಗಿದ್ದಾಗ ಸುಮಾರು ಸಮಯ ಸಂಜೆ 4.00 ರಿಂದ 5.00 ಗಂಟೆ ಆಗಿತ್ತು. ಮಹಜರ್ ಗೆ ಬರುವಂತೆ ನನಗೆ ಪೊಲೀಸರು ಕೊಟ್ಟಿದ್ದ ನೋಟಿಸಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ನೋಟಿಸನ್ನು ನಿಪಿ.81 ಎಂದು, ಹಾಗೂ ಸಾಕ್ಷಿಯ ರುಜುವನ್ನು ನಿಪಿ.81(ಎ) ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ**,** ಸರ್ಕಾರಿ ಅಭಿಯೋಜಕರವರು ಪಿ**.**ಎಫ್**.** ನಂಃ **185/2021,** ದಿಃ **27.06.2021** ರ ಮಾಲು ಪಟ್ಟಿಯಲ್ಲಿ ನಮೂದಾಗಿರುವ ಕ್ರಮ ನಂಃ **4** ಮತ್ತು **5** ರಲ್ಲಿ ಇರುವ ವಸ್ತುಗಳು ಇನ್ನೂ ಎಫ್**.**ಎಸ್**.**ಎಲ್ ನಿಂದ ವಾಪಸ್ಸು ಬಂದಿಲ್ಲದೇ ಇರುವುದಕ್ಕೆ**,** ವಿಚಾರಣೆಯನ್ನು ಮುಂದೂಡುವಂತೆ ಕೋರಿರುತ್ತಾರೆ**.)**

ಆದ್ದರಿಂದ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.